International Journal of Kannada Research
www.kannadajournal.com

**ISSN: 2454–5813**
IJKR 2019; 5(3): 01-03
© 2019 IJKR
www.kannadajournal.com
Received: 01-05-2019
Accepted: 03-06-2019

**ಮಂಜುನಾಥ ಸಿದ್ಧರಾಮಪ್ಪ ಶೆಟ್ಟಿ**
ಸಂಶೋಧಕರು ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**Correspondence**
**ಮಂಜುನಾಥ ಸಿದ್ಧರಾಮಪ್ಪ ಶೆಟ್ಟಿ**
ಸಂಶೋಧಕರು ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

# ಪ್ರಕಾಶನ ಕ್ಷೇತ್ರಕ್ಕೆ ಬಸವರಾಜ ಕೊನೇಕರ ಕೊಡುಗೆ

**ಮಂಜುನಾಥ ಸಿದ್ಧರಾಮಪ್ಪ ಶೆಟ್ಟಿ**

ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಪುಟ್ಟ ಗ್ರಾಮವಾದ ಮಾಡ್ಯಾಳದಲ್ಲಿ ಜನಿಸಿ ಗುಲಬರ್ಗಾ ನಗರದಲ್ಲಿ ಶ್ರೀಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಸಂಸ್ಥೆಯೊಂದನ್ನು ಹುಟ್ಟುಹಾಕಿ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಪುಸ್ತಕ ಪ್ರಕಾಶನ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡಿದ ಮಹಾನ ಪ್ರಕಾಶಕರೆ ಶ್ರೀ ಬಸವರಾಜ ಕೊನೇಕ.
ಶ್ರೀಯುತ ಬಸವರಾಜ ಕೊನೇಕರವರು ಈಶಾಬಾಯಿ ಮತ್ತು ಗುರಪ್ಪ ಎಂಬ ದಂಪತಿಗಳ ಉದರದಲ್ಲಿ ಕ್ರಿ.ಶ. 1952ರ ಬಸವಜಯಂತಿಯ ದಿನದಂದು ಸೂರ್ಯನುದಯಿಸಿದಂತೆ ಮಹಾ ಪ್ರಜ್ವಲ ಶಕ್ತಿಯೊಂದರ ರೂಪದಲ್ಲಿ ಜನಿಸಿದರು. ಅಂತೆಯೇ ಇವರು ತಮ್ಮ ಕಾಯಕವೇ ಕೈಲಾಸ ಎಂದು ಸದಾ ಪ್ರಕಾಶನದ ಕೆಲಸದಲ್ಲಿ ನಿರತರಾಗಿದ್ದರಿಂದಲೇ ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಸಂಸ್ಥೆ ರಾಜ್ಯದಲ್ಲಿಯೇ ಒಂದು ಮಾದರಿ ಪ್ರಕಾಶನ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

**ಪ್ರಕಾಶನ ಕ್ಷೇತ್ರದಲ್ಲಿ ಮಾಡಿದ ಸಾಧನೆ ಮತ್ತು ಕೊಡುಗೆಗಳು.**
ಬಸವರಾಜ ಕೊನೇಕರವರು ಪ್ರಕಾಶನ ಕ್ಷೇತ್ರದಲ್ಲಿ ವಿಶಿಷ್ಟ ಮತ್ತು ವಿನೂತನವಾದ ಸಂಸ್ಥೆಯೊಂದನ್ನು ಸ್ಥಾಪಿಸಿ ತಮ್ಮ ಕಾಯಕ ಸಿದ್ಧಾಂತಗಳ ಮೂಲಕ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಸಾಹಿತ್ಯದ ಬಗ್ಗೆ ಆಸಕ್ತಿ, ಅಭಿರುಚಿಯನ್ನು ಮೂಡಿಸುವಂತಹ ಸಾಹಿತ್ಯದ ಸುಧಾರಣೆಗೆ ಪ್ರೋತ್ಸಾಹ ನೀಡುತ್ತ ಬಂದ ತಮ್ಮನ್ನು ತಾವು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡವರು. ಎಂಬತ್ತರ ದಶಕದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶವು ಸಾಹಿತ್ಯ ಕ್ಷೇತ್ರದಲ್ಲಿ ತೀರಾ ಹಿಂದುಳಿದಂತಹ ಸಂದರ್ಭದಲ್ಲಿ ಇಲ್ಲಿನ ಸ್ಥಳೀಯ ಆಸಕ್ತ ಸಾಹಿತಿಗಳಿಗೆ ಲೇಖನ, ಕವನ, ಕಾದಂಬರಿ, ಕಿರುಹೊತ್ತಿಗೆ, ಸಣ್ಣಕತೆ, ಪಠ್ಯ ಪುಸ್ತಕ, ಹೀಗೆ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿಯೂ ತಮ್ಮನ್ನು ತಾವು ಗುರುತಿಸಿಕೊಳ್ಳುವಲ್ಲಿ ಹಲವಾರು ಸಾಹಿತ್ಯ, ಲೇಖಕರು, ಕಾದಂಬರಿಕಾರರನ್ನು ಗುರುತಿಸಿ ಅವರಿಗೆ ಬರವಣಿಗೆಯ ಗೀಳನ್ನು ಹಚ್ಚಿದ ಶ್ರೇಯಸ್ಸು ಶ್ರೀ ಬಸವರಾಜ ಕೊನೇಕರ್‌ರವರಿಗೆ ಮಾತ್ರ ಸಲ್ಲಬೇಕು.

**ಬೃಹದಾಕಾರದಲ್ಲಿ ಬೆಳೆಯುತ್ತಿರುವ ಸಿದ್ಧಲಿಂಗೇಶ್ವರ ಪ್ರಕಾಶನ:**
ಮೂಲತಃ ಬಸವರಾಜ ಕೊನೇಕರ್ ರವರು ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಮಾಡ್ಯಾಳ ಗ್ರಾಮದವರು. ಇವರು ಗುಲಬರ್ಗಾಕ್ಕೆ ಓದಲು ಬಂದು ಪುಸ್ತಕದಂಗಡಿ ಯಲ್ಲಿ ಸಾಮಾನ್ಯ ಕೆಲಸಗಾರರಾಗಿ ಸೇರಿ ಇಪ್ಪತ್ತೈದು ವರ್ಷಗಳ ಹಿಂದೆ ಒಂದು ಸಣ್ಣ ಪುಸ್ತಕದ ಅಂಗಡಿಯನ್ನು ತೆರೆಯಲು ಕಾರ್ಪೋರೇಶನ್ ಬ್ಯಾಂಕಿನಿಂದ ಸಾಲ ಪಡೆದರು, ಅದೇ ಇಂದು ಕರ್ನಾಟಕದಲ್ಲಿಯೇ ಈ ಪ್ರಕಾಶನ ಸಂಸ್ಥೆ ಗುರುತಿಸುವಂತಹ ಕೆಲಸ ಮಾಡಿದ್ದು ಬಸವರಾಜ ಕೊನೇಕರವರ ಮಹತ್ ಸಾಧನೆಯಿಂದಲೇ ಎಂದರೆ ತಪ್ಪಾಗಲಾರ

**ಸಾಹಿತ್ಯದ ವಿವಿಧ ಪ್ರಕಾರದ ಕೃತಿಗಳು ಹೊರತಂದ ಸಾಧನೆ.**
ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸಂಸ್ಥೆ ಮತ್ತು ಬುಕ್ ಡಿಪೋ ಮಾಡಿದ ಸಾಧನೆಗಳು ಹೇಳತೀರದಷ್ಟು ಅದು ಸಾಹಿತ್ಯದ ವಿವಿಧ ಪ್ರಕಾರಗಳಾದ ಕಥೆ, ನಾಟಕ, ಕಾದಂಬರಿ, ಸಣ್ಣ ಕಥೆ, ಜೀವನ ಚರಿತ್ರೆ, ವೈಜ್ಞಾನಿಕ ಶಿಕ್ಷಣ, ಲಲಿತ ಪ್ರಬಂಧ, ವೃದ್ಯ ಸಾಹಿತ್ಯ, ಸಂಪಾದನೆಗಳು, ಹೀಗೆ ಒಂದಲ್ಲ ಎರಡಲ್ಲಿ ಇದುವರೆಗೂ ಹತ್ತು ಹಲವಾರು ಕೃತಿಗಳನ್ನು ಹೊರ ತಂದ ಸಾಧನೆ ಶ್ರೀ ಬಸವರಾಜ ಕೊನೇಕರವರಿಗೆ ಸಲ್ಲುತ್ತದೆ.

**ಉದಯೋನ್ಮುಖ ಲೇಖಕರನ್ನು ಪರಿಚಯಿಸುವ ಕಾರ್ಯ ಸಾಧನೆ.**
ಹೈದ್ರಾಬಾದ್ ಕರ್ನಾಟಕದಲ್ಲಿನ ಉದಯೋನ್ಮುಖ ಲೇಖಕರನ್ನು ನಾಡಿನಾದ್ಯಂತ ಪರಿಚಯಿ ಸುವ ಕಾರ್ಯವನ್ನು ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನದ ಪ್ರಕಾಶಕರಾದ ಬಸವರಾಜ ಕೊನೇಕರ್ ರವರು ಮಾಡಿದ್ದು ಅತ್ಯಂತ ದೊಡ್ಡ ಸಾಧನೆಯೇ ಸರಿ.

**ಮೂರು ದಶಕಗಳ ಭಗಿರತ ಪ್ರಯತ್ನ ಮತ್ತು ಕಠಿಣ ಪರಿಶ್ರಮ.**
ಶ್ರೀ ಬಸವರಾಜ ಕೊನೇಕರ್‌ರವರು ಮೂರು ದಶಕಗಳ ಭಗಿರತ ಪ್ರಯತ್ನ ಹಾಗೂ ಕಠಿಣ ಪರಿಶ್ರಮದಿಂದ ಪಠ್ಯಪುಸ್ತಕ, ಸಾಹಿತ್ಯ, ಕೃತಿ, ಜನಪ್ರಿಯ ಮಾಲಿಕೆಗಳ ಹೆಸರಲ್ಲಿ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ಅಷ್ಟೇ ಅಲ್ಲದೆ ನಾಡಿನ ಹೆಸರಾಂತ ಲೇಖಕರ ಪುಸ್ತಕಗಳನ್ನು ಪ್ರಕಟಿಸುವುದರ ಜೊತೆ ಜೊತೆಯಲ್ಲಿಯೇ ಹೈದ್ರಾಬಾದ್ ಕರ್ನಾಟಕ ಭಾಗದ ಉದಯೋನ್ಮುಖ ಬರಹಗಾರರ ಪುಸ್ತಕಗಳನ್ನು ಪ್ರಕಟಿಸಿ ಪ್ರೋತ್ಸಾಹಿಸುತ್ತೆ ಬಂದಿರುವುದು ಒಂದು ಅವಿರತ ಪ್ರಯತ್ನವೇ ಸರಿ.

**ತಾನೇ ಸ್ಥಾಪಿಸಿದ ದಾಖಲೆಗಳನ್ನು ತಾನೇ ಮುರಿಯುತ್ತ, ಪ್ರಕಾಶನ ಕ್ಷೇತ್ರದಲ್ಲಿ ದಾಪುಗಾಲು ಇಟ್ಟು ಸಂಸ್ಥೆಯಾಯಿತು**
ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಮತ್ತು ಬುಕ್ ಡಿಪೋ ಸಂಸ್ಥೆ ವರ್ಷದಿಂದ ವರ್ಷಕ್ಕೆ ತಾನೇ ಸ್ಥಾಪಿಸಿದ ದಾಕಲೆಗಳನ್ನು ತಾನೇ ಮುರಿಯುತ್ತ, ಪ್ರಕಾಶನ ಕ್ಷೇತ್ರದಲ್ಲಿ ದಾಪುಗಾಲಿಡುತ್ತಾ ಮುನ್ನಡೆಯುತ್ತಿರುವುದಕ್ಕೆ ಕೆಳಗಿನ ಕೆಲವು ಉದಾಹರಣೆಗಳು ನೋಡಿದರೆ ನಮಗದರ ಅರಿವಾಗದೆ ಇರಲಾರದು.

**ವರ್ಷದಿಂದ ವರ್ಷಕ್ಕೆ ಪ್ರಕಾಶನದ ದಾಖಲೆಗಳ ವಿವರ.**
2002 ರಲ್ಲಿ ಬೆಳ್ಳಿ ಹಬ್ಬದ ಸಂಭ್ರಮ 25 ಕೃತಿಗಳು.
2004 ರಲ್ಲಿ 57 ಕೃತಿಗಳು.
2006 ರಲ್ಲಿ 70 ಕೃತಿಗಳು.
2008 ರಲ್ಲಿ 85 ಕೃತಿಗಳು.
2010 ರಲ್ಲಿ 90 ಕೃತಿಗಳು.
2010 ರವರೆಗೆ ಒಟ್ಟು 750 ಕೃತಿಗಳು ಪ್ರಕಟ.

**ರಾಜ್ಯದ ಇತರೆ ಪ್ರಸಿದ್ಧ ಪ್ರಕಾಶನ ಸಂಸ್ಥೆಗಳಿಗೆ ಸರಿಸಾಟಿಯಾಗಿದೆ.**
ಶ್ರೀ ಬಸವರಾಜ ಕೊನೇಕರವರ ಅತಿ ಮಹತ್ವದ ಸಾಧನೆ ಎಂದರೆ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸಂಸ್ಥೆ ಮತ್ತು ಬುಕ್ಕ ಡಿಪೋವನ್ನು ರಾಜ್ಯದ ಇತರೆ ಮಹತ್ವದ ಪ್ರಕಾಶನ ಸಂಸ್ಥೆಗಳಾದ, ಸವಪ್ನ ಬುಕ್ ಹೌಸ್ ಬೆಂಗಳೂರು, ವಿದ್ಯಾನಿಧಿ ಪ್ರಕಾಶನ ಗದಗ, ಚೇತನ ಬುಕ್ಕ ಹೌಸ್–ಮೈಸೂರು ಈ ಪ್ರಕಾಶನ ಸಂಸ್ಥೆಗಳಿಗೆ ಇಂದು ಸರಿಸಾಟಿಯಾಗಿ ನಿಂತಿದ್ದ ಯಶಸ್ಸು ಶ್ರೀ ಬಸವರಾಜ ಕೊನೇಕ, ಸಿದ್ಧಲಿಂಗ ಕೊನೇಕ ಮತ್ತು ಶರಣ ಕೊನೇಕರವರಿಗೆ ಮಾತ್ರ ಸಲ್ಲಬೇಕು. ಈ ಸಂಸ್ಥೆಯು ಮೂರು ದಶಕಗಳಿಗಿಂತಲೂ ಹೆಚ್ಚು ಹಿರಿಯ ಪ್ರಕಾಶನ ಸಂಸ್ಥೆಯೊಂದಿಗೆ ಆರೋಗ್ಯಕರವಾದ ಸ್ಪರ್ಧೆಯನ್ನುಡ್ಡಿ ತನ್ನ ಭದ್ರ ನೆಲೆಯನ್ನು ಕಂಡುಕೊಳ್ಳುತ್ತಾ ಬಂದಿದೆ.

**ಬಸವರಾಜ ಕೊನೇಕರ ಕಾಯಕ ನಿಷ್ಠೆಗೆ ಬಣ್ಣಿಸಿದ ವ್ಯಕ್ತಿಗಳು.**

**1. ಶಿವರಾಜ ಪಾಟೀಲ್ – ಖ್ಯಾತ ಸಾಹಿತಿ, ಸಮಾಜ ಸೇವಕ.**
ಹೈದ್ರಾಬಾದ ಕರ್ನಾಟಕ ಹಿಂದುಳಿದಿದೆಯೆಂಬ ಹಣೆಪಟ್ಟಿಯಲ್ಲಿನ ಪ್ರಕಾಶನ ಸಂಸ್ಥೆಯ ಕ್ಷೇತ್ರದ ಕಪ್ಪು ಗೆರೆ ಅಳಿಸಿ ಅದರಲ್ಲಿ ಮುಂದು ಎಂಬುದನ್ನು ತೋರಿಸಿಕೊಟ್ಟ ಖ್ಯಾತಿ ಶ್ರೀ ಬಸವರಾಜ ಕೊನೇಕರ್‌ರವರಿಗೆ ಸಲ್ಲುತ್ತದೆ.

**2. ಡಾ.ಗುರುಲಿಂಗ ಕಾಪಸೆ–ಕರ್ನಾಟಕ ಸಾಹಿತ್ಯ, ಅಕಾಡೆಮಿ ಮಾಜಿ ಅಧ್ಯಕ್ಷ**
ಏಕಕಾಲಕ್ಕೆ 85 ಪುಸ್ತಕಗಳನ್ನು ಮುದ್ರಿಸಿ ಬಿಡುಗಡೆ ಮಾಡುತ್ತಿರುವುದು ಪವಾಡ "ಪ್ರಕಾಶನ ಲೋಕದ ವಿಶ್ರಮ" ಎಂದು ಬಣ್ಣಿಸಿದ ಅವರು ಯಾವ ಸಂಸ್ಥೆಯೂ ಮಾಡದ ಸಾಧನೆ ಇದಾಗಿದೆ ಎಂದು ಹೇಳಿದ್ದಾರೆ.

**3. ಡಾ.ಕಲಬುರಗಿ ಸಾಹಿತ್ಯ ಅಕಾಡೆಮಿ – ಪ್ರಶಸ್ತಿ ವಿಜೇತ ಸಂಶೋಧಕ**
ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಸಂಸ್ಥೆ ಮಾಡುತ್ತಿರುವ ಸೇವೆಯನ್ನು ಮುಕ್ತಕಂಠದಿಂದ ಹೊಗಳಿದ ಈ ಸಂಸ್ಥೆ ರಾಜ್ಯದಲ್ಲಿಯೇ ಮೊದಲ ಸ್ಥಾನ ಹೊಂದುವಂತಾಗಲಿ ಎಂದು ಶುಭ ಕೋರಿದರು.

**4. ಶಿವರಂಜನ್ ಸತ್ಯಂಪೇಟ–ಖ್ಯಾತ ಪತ್ರಕರ್ತ.**
ಮೂರು ದಶಕಗಳ ಅವಿರತ ಪ್ರಯತ್ನ ಹಾಗೂ ಕಠಿಣ ಪರಿಶ್ರಮದಿಂದ ಪಠ್ಯಪುಸ್ತಕ, ಸಾಹಿತ್ಯಕೃತಿ, ಜನಪ್ರಿಯ ಮಾಲಿಕೆಗಳ ಹೆಸರಲ್ಲಿ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಈ ಸಂಸ್ಥೆ ಪ್ರಕಟಿಸಿ, ನಾಡಿನ ಹೆಸರಾಂತ ಲೇಖಕರ ಪುಸ್ತಕಗಳನ್ನು ಪ್ರಕಟಿಸುವ ಘದರ ಜೊತೆಗೆ ಹೈ.ಕ.ಭಾಗದ ಉದಯೋನ್ಮುಖ ಬರಹಗಾರರ ಪುಸ್ತಕಗಳನ್ನು ಪ್ರಕಟಿಸಿ ಪ್ರೋತ್ಸಾಹಿಸುತ್ತಿದ್ದಾರೆ.

**5. ಪ್ರೊ. ಈ.ಎಸ್.ಸಿದ್ಧಲಿಂಗಯ್ಯನವರು – ಹಿರಿಯ ಸಾಹಿತಿಗಳು**
ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸಂಸ್ಥೆ ಕಲ್ಯಾಮ ಕರ್ನಾಟಕದ ಉದಯೋನ್ಮುಖ ಲೇಖಕರ ಬರಹಗಳು ಪ್ರಕಟಿಸಿ ಪ್ರೋತ್ಸಾಹಿಸುವ ಅಪ್ಪಟ ಬೆಸ್ಟ್ ಪಬ್ಲಿಷರ್ಸ್, ದೆಹಲಿ ಕನ್ನಡ ಪತ್ರಿಕೆಯಿಂದ ಅತ್ಯುತ್ತಮ ಪ್ರಕಾಶನ ಇವುಗಳಲ್ಲದೇ ಭಾಲ್ಕಿ ಪಟ್ಟದೇವರ ಸ್ಮರಣಾರ್ಥ, ಕೊಪ್ಪಳ ಭೀಮರಾಯ ಮತ್ತು ಕೊಕನೂರಿನ ತಾಯಿ ಕೊಡಮಾಡಿದ ಪ್ರಶಸ್ತಿಗಳು ಸಂದಿರುವುದು ಅಭಿಮಾನದ ದ್ಯೋತಕವಾಗಿದೆ ಎಂದರು.

**6. ಗವಿಸಿದ್ಧಪ್ಪ ಎಚ್.ಪಾಟೀಲ್–ಖ್ಯಾತ ಸಾಹಿತಿಗಳು.**
2002ರಲ್ಲಿ ತಮ್ಮ ಸಂಸ್ಥೆಯ ಬೆಳ್ಳಿ ಹಬ್ಬದ ಸಂಭ್ರಮದ ಪೂರ್ವದಲ್ಲಿ ಹೈದ್ರಾಬಾದ್ ಕರ್ನಾಟಕದ ಲೇಖಕರನ್ನು ಗುರುತಿಸಿ, ಮುಕ್ತವಾಗಿ ಎಲ್ಲರಿಗೂ ಪುಸ್ತಕ ಪ್ರಕಟಣೆಯನ್ನು ನೀಡಿ, ಹಸ್ತ ಪ್ರತಿಗಳನ್ನು ಆಹ್ವಾನಿಸಿ, ಒಂದು 35 ಹಸ್ತಪ್ರತಿಗಳಲ್ಲಿ 25 ಕೃತಿಗಳನ್ನು ಏಕಕಾಲಕ್ಕೆ ಪ್ರಕಟಣೆ ಮಾಡಿದ್ದು ದಾಖಲಾರ್ಹ ಸಂಗತಿ ಎಂದಿದ್ದಾರೆ.

**ಶ್ರೀ ಬಸವರಾಜ ಕೊನೇಕರವರಿಗೆ ಸಂದ ಪ್ರಶಸ್ತಿಗಳು**
ಬಸವರಾಜ ಕೊನೇಕರವರ ಉತ್ತಮ ಪ್ರಕಾಶನ ಸಾಧನೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಮೆಚ್ಚುಗೆ ವ್ಯಕ್ತಪಡಿಸಿ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಅವುಗಳನ್ನು ಈ ಮುಂದಿನಂತೆ ನೋಡಬಹುದು.

1. ಗುಲಬರ್ಗಾ ವಿಶ್ವವಿದ್ಯಾಲಯ 1997 ರಲ್ಲಿ "ಉತ್ತಮ ಪ್ರಕಾಶಕ" ಎಂದು ಗೌರವಿಸಿದೆ.
2. ಮಹಾಂತ ಜ್ಯೋತಿ ಪ್ರತಿಷ್ಠಾನ ಸಂಸ್ಥೆ ಗುಲಬರ್ಗಾವು 1997 ರಲ್ಲಿ "ಉತ್ತಮ ಪ್ರಕಾಶಕ" ಎಂದು ಗೌರವಿಸಿದೆ.
3. 2001 ರಲ್ಲಿ ಮಹಾಂತ ಜ್ಯೋತಿ ಪ್ರತಿಷ್ಠಾನ ಗುಲಬರ್ಗಾ ಬಸವ ಜಯಂತಿ ನಿಮಿತ್ಯ "ಕಾಯಕ ರತ್ನ" ಪ್ರಶಸ್ತಿ ನೀಡಲಾಗಿದೆ.
4. 2002 ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು "ಉತ್ತಮ ಪ್ರಕಾಶಕ" ಎಂಬ ಪ್ರಶಸ್ತಿ ನೀಡಲಾಗಿದೆ.

5. 2001–02 ರಲ್ಲಿ ಮಂಜುನಾಥ ವಿದ್ಯಾವರ್ಧಕ "ಯುವ ಪುರಸ್ಕಾರ" ಜಿಲ್ಲಾ ಯುವ ಪುರಸ್ಕಾರ ಹಾಗೂ ತಿರುಳ್ಗನ್ನಡ ಗೌರವ ಸನ್ಮಾನ ಮಂಡರಗಿ ಭೀಮರಾಯ ಹೈ.ಕ.ಯುವ ಪ್ರಕಾಶಕ ಪುರಸ್ಕಾರ ಪ್ರಶಸ್ತಿ ನೀಡಲಾಗಿದೆ.
6. 2004 ರಲ್ಲಿ "ಉತ್ತಮ ಪ್ರಕಾಶಕರು" ಎಂದು ಪ್ರಶಸ್ತಿ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾವು ಪ್ರಶಸ್ತಿ ನೀಡಿತು.
7. 2005 ರಲ್ಲಿ ಮಹಾಂತ ಜ್ಯೋತಿ ಪ್ರತಿಷ್ಠಾನ ಟ್ರಸ್ಟ್–ಗುಲಬರ್ಗಾ ಮಾತೋಶ್ರೀ ಬಸಮ್ಮ ಸಿರವಾರ ಸ್ಮಾರಕ, ಕರ್ನಾಟಕ ಏಕೀಕರಣ ಪ್ರಯುಕ್ತ ಸುವರ್ಣ ಕರ್ನಾಟಕ ಸವಿನೆನಪಿಗಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ "ಸುವರ್ಣ ಸಿರಿ" ಎಂಬ ಪ್ರಶಸ್ತಿ ನೀಡಲಾಗಿದೆ.
8. 2005 ರಲ್ಲಿ ತಾಯಿ ಪ್ರಕಾಶನ ಕುಕನೂರು ಕೊಪ್ಪಳ ಜಿಲ್ಲೆ "ಉತ್ತಮ ಪ್ರಕಾಶಕ" ಪ್ರಶಸ್ತಿ ನೀಡಿತು.
9. 2007 ರಲ್ಲಿ ಎಂ.ಎಸ್.ಐ.ಎಲ್. ಗುಲಬರ್ಗಾ ವಿಭಾಗದಲ್ಲಿ ಅಧಿಕೃತ ಮಾರಾಟಗಾರರು (ಪ್ರಥಮ ದರ್ಜೆ ಮಾರಾಟಗಾರರೆಂದು ಪ್ರಶಸ್ತಿಯನ್ನು ನೀಡಲಾಗಿದೆ.)
10. 2009–14, 15, ನವೆಂಬರ ರಾಜ್ಯಮಟ್ಟದ 7ನೇ ಶೈಕ್ಷಣಿಕ ಸಮ್ಮೇಳನ ಕೊಪ್ಪಳ "ಕಾಣಿಕೆಯನ್ನು ನೀಡಿದ್ದಾರೆ"
11. 2004 ರಲ್ಲಿ ದೆಹಲಿ ಕನ್ನಡ ಮಾಸ ಪತ್ರಿಕೆ ನವದೆಹಲಿ 80 ಸಿ.ಮುನಿಕಾರ ನವದೆಹಲಿ, ನವದೆಹಲಿ ಕರ್ನಾಟಕ ಭವನ ನಾಗರಾಜ ವೇದಿಕೆಯಲ್ಲಿ ಜರುಗಿದ 23ನೇ ರಾಷ್ಟ್ರೀಯ ಕನ್ನಡ ಸಮ್ಮೇಳನದಲ್ಲಿ ಶ್ರೀಯುತ ಬಸವರಾಜ ಕೊನೇಕರವರು ಹಿಂದೂಳಿದ ಹೈದ್ರಾಬಾದ ಕರ್ನಾಟಕದ ಪ್ರಕಾಶನ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಕಂಡು ಸಂತೋಷಗೊಂಡು ಇವರು ಗಣನೀಯ ಸೇವೆಯನ್ನು ಪರಿಗಣಿಸಿ "ಉತ್ತಮ ಪ್ರಕಾಶಕ" ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಶ್ರೀ ಬಸವರಾಜ ಕೊನೇಕರವರಿಗೆ 60 ವರ್ಷ ತುಂಬಿದ ಈ ಶುಭ ಸಂದರ್ಭದಲ್ಲಿ ನನಗೊಂದು ಲೇಖನ ರೂಪದಲ್ಲಿ ಹಾರೈಕೆ ಮತ್ತು ಅಭಿನಂದಿಸುತ್ತಿರುವುದು ತುಂಬಾ ಸಂತೋಷವೇನಿಸುತ್ತದೆ. ಶ್ರೀ ಬಸವರಾಜ ಕೊನೇಕರ ಹಾಗೂ ಅವರ ಮಕ್ಕಳಾದ ಶ್ರೀ ಸಿದ್ಧಲಿಂಗ ಮತ್ತು ಶರಣು ಕೊನೇಕರವರಿಗೆ ಈ ಸಂದರ್ಭದಲ್ಲಿ ಅವರಿಗೂ ಕೂಡಾ ಅಭಿನಂದನೆ ಸಲ್ಲಿಸದೇ ಇರಲಾರೆನು. ಈ ಕುಟುಂಬ ವರ್ಗ ಹೀಗೆ ಸಹಸ್ರಾರು ಲೇಖಕರನ್ನು ಪ್ರೋತ್ಸಾಹಿಸಿ, ತಮ್ಮ ಸಂಸ್ಥೆಯು ಕೂಡ ಮುಗಿಲೆತ್ತರಕ್ಕೆ ಹಾರಿ ಇನ್ನು ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡು ಹೀಗೆ ಮುಂದುವರೆಯಲೆಂದು ಹಾರೈಸುವೆ.